Tractors owned by Government.

Q.—427. **Sri D. DEVARAJ URS** (Hunsur).—

Will the Government be pleased to state :—

(*a*) the number of tractors they own at present ;

(*b*) how many of them are in working condition ;

(*c*) how many of them are still under repairs.

(*d*) how many of them have become utterly useless ?

A.—**Sri H. SIDDAVEERAPPA** (Minister for Home and Industries).—

(*a*) 121.
(*b*) 47.
(*c*) 68.
(*d*) 6.

ಶ್ರೀ ಡಿ. ದೇವರಾಜ ಅರಸ್.—ಈ ಟ್ರ್ಯಾಕ್ಟರುಗಳನ್ನು ಕೊಂಡು ಕೊಂಡದ್ದು ಯಾವಾಗ ?

Sri H. SIDDAVEERAPPA.—I have already stated last time that some of them were purchased in 1947 and some in 1948.

Mr. SPEAKER.—It was answered day before yesterday.

ಶ್ರೀ ಡಿ. ದೇವರಾಜ ಅರಸ್.—ಇದಕ್ಕೆ ಒಟ್ಟು ಎಷ್ಟು ಬಂಡವಾಳ ಹಾಕಿದೆ ?

Sri H. SIDDAVEERAPPA.—To give the figures for total investment, I think, I want notice. I have got the figures here and I will give it to you.

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಈಗ ನಷ್ಟವೇನಾದರೂ ಸಂಭವಿಸಿದೆಯೇ ?

Sri H. SIDDAVEERAPPA.—As it is, the whole lot will be depreciated, because most of them are too old. The total value invested is Rs. 21,88,882 for the entire number of tractors including bull-dozers.

Sri D. DEVARAJ URS.—In the event of your winding up this organisation, what may be the line ?

Sri H. SIDDAVEERAPPA.—That I cannot say at the moment.

ಶ್ರೀ ಡಿ. ದೇವರಾಜ ಅರಸ್.—ಈ ಶಾಖೆಯನ್ನು ಮುಚ್ಚಬೇಕೆಂಬ ಅಭಿಪ್ರಾಯವಿದೆಯೇ ಸರ್ಕಾರಕ್ಕೆ ?

ಶ್ರೀ ಎಚ್. ಸಿದ್ದವೀರಪ್ಪ.—ಆದಷ್ಟು ಕಡಮೆ ಮಾಡಬೇಕೆಂಬುದು ನಮ್ಮ ಉದ್ದೇಶ. ಆದರೆ ಬುಲ್ ಡೋಜರುಗಳನ್ನು ಇಟ್ಟು ಕೊಂಡಿರುತ್ತೇವೆ.

ಶ್ರೀ ಡಿ. ದೇವರಾಜ ಅರಸ್.—ಈ 68 ಟ್ರ್ಯಾಕ್ಟರುಗಳು ಯಾವಾಗ ರಿಪೇರಿಯಾಗುವುದು ? ಹೋದ ವರ್ಷ ರಿಪೇರಿ ಪ್ರಾರಂಭವಾಗಿದೆಯಲ್ಲವೇ ?

Sri H. SIDDAVEERAPPA.—The question is again that of throwing good money over bad money. I have to purchase a large number of spare parts at a big cost. So I have seriously been thinking what I should do about them.

ಶ್ರೀ ಡಿ. ದೇವರಾಜ ಅರಸ್.—ಹಾಗಾದರೆ, ರಿಪೇರಿ ಮಾಡುವುದನ್ನು ನಿಲ್ಲಿಸುತ್ತೀರಾ ?

Sri H. SIDDAVEERAPPA.—My idea is to dispose of the whole thing. ಯಾವ ರೀತಿ ಮಾಡಬೇಕೆಂಬುದನ್ನು ಯೋಚಿಸುತ್ತಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ರಿಪೇರಿಯಾಗದೆ ಮಾರಾಟಮಾಡುವುದು ಹೇಗೆ ?

Sri H. SIDDAVEERAPPA.—There are people who want to purchase as they are.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವುದಕ್ಕೆ ಸಬ್‌ಸಿಡಿ ಮೂಲಕ ಅಥವಾ ಸಾಲವಾಗಿ ಸರ್ಕಾರದವರು ಹಣ ಕೊಡುತ್ತಾರೆಯೇ ?

Sri H. SIDDAVEERAPPA.—In this respect most favoured treatment will be given to agriculturists.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಬುಲ್‌ಡೋಜರ್‌ಗಳಿರುತ್ತವೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆಗುತ್ತದೆ.

Mr. SPEAKER.—It was answered day before yesterday in connection with question No. 60.

ಶ್ರೀ ಎಚ್. ಎಸ್: ರುದ್ರಪ್ಪ.—ತಾವೀಗ ಅಲ್ಲಿ ಎಷ್ಟು ಜನರಿಗೆ ಸಂಬಳ ಕೊಡುತ್ತಿದ್ದೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರನ್ನಾಗಲೆ ಕೆಲಸದಿಂದ ತೆಗೆದುಹಾಕಲಾಗಿದೆ. ಇನ್ನು ಕೆಲವರಿಗೆ ಸಂಬಳ ಕೊಡಲಾಗುತ್ತಿದೆ.

ಶ್ರೀ ಎಚ್. ಎಸ್: ರುದ್ರಪ್ಪ.—ಹೋದ ವರ್ಷ ರಿಪೇರಿಗಾಗಿ ಖರ್ಚಾದ ಮೊಬಲಗೆಷ್ಟು ?

ಶ್ರೀ ಎಚ್. ಸಿದ್ದವೀರಪ್ಪ.—ಸುಮಾರು 2½ ಲಕ್ಷ

ಶ್ರೀ ಎಚ್. ಎಸ್. ರುದ್ರಪ್ಪ.—ಹೋದ ಸಾಲಿನ ಬಡ್ಜೆಟ್ಟಿನಲ್ಲಿ ಈ ಬಾಬಿಗಾಗಿ ಎಷ್ಟು ಹಣವನ್ನು ಮಂಜೂರುಮಾಡಲಾಗಿತ್ತು ?

ಶ್ರೀ ಎಚ್. ಸಿದ್ದವೀರಪ್ಪ.—ನನ್ನಲ್ಲಿ ಈಗ ಆ ಲೆಕ್ಕ ಪತ್ರಗಳಿಲ್ಲ. ನೋಟೀಸ್.

ಶ್ರೀ ಎಚ್. ಎಸ್. ರುದ್ರಪ್ಪ.—ಆ ರಿಪೇರಿ ಕೆಲಸಗಳನ್ನೆಲ್ಲಾ ತಾವೇ ಸರ್ಕಾರದ ಪರವಾಗಿ ಮಾಡಿಸಿದಿರೊ ಅಥವಾ ಬೇರೆ ಯಾವುದಾದರೂ ಕಂಪೆನಿಯವರ ಮೂಲಕ ರಿಪೇರಿ ಮಾಡಿಸಿದಿರೋ ?

ಶ್ರೀ ಎಚ್. ಸಿದ್ದವೀರಪ್ಪ.—ಕಂಪೆನಿಯವರ ಸಹಾಯವನ್ನು ಪಡೆದೇ ಮಾಡಿಸಲಾಗಿದೆ.

ಶ್ರೀ ಎಸ್. ಎಸ್. ರುದ್ರಪ್ಪ.—ಅವರು ರಿಪೇರಿ ಬಗ್ಗೆ ಎಷ್ಟು ಖರ್ಚನ್ನು ತೋರಿಸಿದ್ದಾರೆ?

ಶ್ರೀ ಎಚ್. ಸಿದ್ದವೀರಪ್ಪ.—ಅವರೇನೂ charge ಮಾಡಿಲ್ಲ. ಅವರು free service render ಮಾಡಿದ್ದಾರೆ.

Grant of date reserve lands in the nighbourhood of Watadahosalli village in Goribidnur taluk.

Q.—179. **Sri A. MUNIAPPA.** (Siddlaghatta, Chikballapur—Scheduled Castes).—

Will the Government be pleased to state :—

(a) how long back the Harijans and other raiyats of Watadahosalli Village in Goribidnur Taluk give darkhasts for the grant of date reserve lands in the neighbourhood ;

(b) whether these applications have been disposed of ;

(c) if not, whether they would grant the lands asked for by the abovesaid persons, as early as possible ?

A.—**Sri Kadidal MANJAPA** (Minister for Revenue and Public Works).—

(a) During the year 1949-50.

(b) They are under consideration.

(c) The question is under consideration. The Revenue Commissioner and the Excise Commissioner are in favour of reserving the date grove.

*ಶ್ರೀ ಎ. ಮುನಿಯಪ್ಪ.—(ಅ) ಪ್ರಶ್ನೆಗೆ ಉತ್ತರವಾಗಿ 1949–50 ಎಂದು ತಿಳಿಸಿದ್ದೀರಿ. 1948ನೆಯ ಸಾಲಿನಲ್ಲಿ ಡೆಪ್ಯುಟಿ ಕಮಿಷನರು ಸ್ಥಳದ ಅಜಮಾಯಿಷಿಯಿಂದ ಮಾಡಿ ಕಳುಹಿಸಿದ ವರದಿ ಏನಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟನೆಯ ಇಸವಿಯಲ್ಲಿ?

ಅಧ್ಯಕ್ಷರು.—ಉತ್ತರದಲ್ಲಿ 1949–50 ಎಂದು ಹೇಳಿದೆ.

ಶ್ರೀ ಕಡಿದಾಳ್ ಮಂಜಪ್ಪ.—1948ರಲ್ಲಿ ಕಳುಹಿಸಿದ ವರದಿಯು ಈಗ ನನ್ನಲ್ಲಿಲ್ಲ.

ಶ್ರೀ ಎ. ಮುನಿಯಪ್ಪ.—ಯಾವ ಯಾವ ಸರ್ವೆ ನಂಬರಿನಲ್ಲಿ ಎಷ್ಟೆಷ್ಟು ಭಾಗ ಉಪಯೋಗಕ್ಕೆ ಬರುವಂಥ ವಾಗಿದೆ, ಎಷ್ಟು ಭಾಗ ಅನುಪಯೋಗವಾಗಿದೆಯೆಂಬುದನ್ನು ಕಂಡು ಹಿಡಿಯಲು ಏನಾದರೂ ಸರ್ವೆ ನಡೆಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಡೆಸಿದ್ದಾರೆ.

ಶ್ರೀ ಎ. ಮುನಿಯಪ್ಪ.—ಹಾಗಾದರೆ ಏನು ಹೊರಪಟ್ಟಿದೆಯೆಂಬುದನ್ನು ತಿಳಿಸುವಿರಾ ?

ಶ್ರೀ ಕಡಿದಾಳ್ ಮಂಜಪ್ಪ —

ಸರ್ವೆ ನಂಬರು 63 ರಲ್ಲಿ 200 ಮರಗಳಿವೆ.
" 64 ರಲ್ಲಿ ಮರಗಳಿಲ್ಲ.
" 65 ರಲ್ಲಿ 55 ಮರಗಳಿವೆ.
" 66 ರಲ್ಲಿ ಡಿಟೋ
" 67 ರಲ್ಲಿ 100 ಮರಗಳಿವೆ.
" 70 ರಲ್ಲಿ 220 ಮರಗಳಿವೆ.
" 71 ರಲ್ಲಿ 200 ಮರಗಳಿವೆ.
" 72 ರಲ್ಲಿ 210 ಮರಗಳಿವೆ.
" 73 ರಲ್ಲಿ 100 ಮರಗಳಿವೆ.
" 74 ರಲ್ಲಿ 29 ಮರಗಳಿವೆ.
" 60 ರಲ್ಲಿ 150 ಮರಗಳಿವೆ.
" 61 ರಲ್ಲಿ 500 ಮರಗಳಿವೆ.

62 ರಲ್ಲಿ and so on. ಹೀಗೆ ಒಟ್ಟು 2,909 ಮರಗಳಿರುತ್ತವೆ.

ಶ್ರೀ ಎ. ಮುನಿಯಪ್ಪ.—ತಾವು ಈ ಸರ್ವೆ ಪರಿಶೀಲನೆ ನಡೆಸಿದ್ದು ಯಾವಾಗ ?

Sri Kadidal MANJAPPA.—Notice please.

ಶ್ರೀ ಎ. ಮುನಿಯಪ್ಪ.—ಕ್ಷಾಮದ ದೆಸೆಯಿಂದ ಮರಗಳನ್ನೆಲ್ಲಾ ಹೊಡೆದು ಹಾಕುತ್ತಿರುವುದು ಸರ್ಕಾರದ ವರಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಮರಗಳಿರುತ್ತವೆಂದು ಸರಕಾರಕ್ಕೆ ವರದಿಬಂದಿದೆ. ಕಳೆದ ಫೆಬ್ರುವರಿ ತಿಂಗಳಿನಲ್ಲಿ ರೆವಿನ್ಯೂ ಕಮಿಷನರು ಖುದ್ದಾಗಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ.

ಶ್ರೀ ಎ. ಮುನಿಯಪ್ಪ.—ಕೆಲವು ಗ್ರಾಮಸ್ಥರು ಮತ್ತು ಹರಿಜನರು ಹೀಗೆ ಒಟ್ಟಾಗಿ 29 ಜನರು ಆ ಜಮೀನಿಗೆ ದರಖಾಸ್ತ್ ಹಾಕಿಕೊಂಡಿದ್ದುದು ತಮಗೆ ಗೊತ್ತಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ಬಗ್ಗೆ ಸ್ಥಳ ಪರೀಕ್ಷೆ ಮಾಡಿ ವರದಿಮಾಡಬೇಕೆಂದು ರೆವೆನ್ಯೂ ಕಮಿಷನರಿಗೆ ತಿಳಿಸಲಾಗಿತ್ತು. ಅದರ ಪ್ರಕಾರ ಅವರೂ ಮತ್ತು ಎಕ್ಸೈಜ್ ಕಮಿಷನರೂ ಸ್ಥಳಕ್ಕೆ ಹೋಗಿ ಅಜಮಾಯಿಷಿ ಮಾಡಿಕೊಂಡು ಬಂದನಂತರ ಅದನ್ನು ಸಾಗುವಳಿಗೆ ಕೊಡಬಾರದೆಂದು ಸಲಹೆ ಮಾಡಿದ್ದಾರೆ.

ಶ್ರೀ ಎ. ಮುನಿಯಪ್ಪ.—ಕೆಲವು ಹರಿಜನ ಮುಖಂಡರೂ ಮತ್ತು ಗ್ರಾಮಸ್ಥರೂ ತಮ್ಮಲ್ಲಿಗೆ ನಿಯೋಗ ಬಂದಿದ್ದಾಗ ತಾವು ರೆಕಾರ್ಡನ್ನು ವೆರಿಫೈ ಮಾಡಿಸುವುದಾಗಿ ಅಪ್ಪಣೆ ಕೊಡಿಸಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎ. ಮುನಿಯಪ್ಪ.—ಆ ತನಿಖೆಯ ವರದಿ ತಮಗೆ ಎಷ್ಟು ದಿನಗಳಲ್ಲಿ ಬರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕಳೆದ ತಿಂಗಳು 5ನೆಯ ತಾರೀಖು ಸ್ಥಳ ಪರೀಕ್ಷೆ ಮಾಡಿ ವರದಿ ಕಳುಹಿಸಿಕೊಟ್ಟಿದ್ದಾರೆ. ಆ ವರದಿಯಾಗಲೆ ಬಂದಿದೆ. ಅದು ಪರಿಶೀಲನೆಯಲ್ಲಿದೆ.

ಶ್ರೀ ಎ. ಮುನಿಯಪ್ಪ.—ಅದನ್ನು ಬೇಗ ತೀರ್ಮಾನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತೇವೆ.